# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 176/2015 ಸಿಡಬ್ಲೂ: 4 ಪಿಡಬ್ಲೂ: 6

ಪ್ರಮಾಣವಚನ ಬೋಧಿಸಲಾಯಿತು ದಿಃ 26-12-2024

ಹೆಸರು : ಶಿವುಕುಮಾರ

ತಂದೆ ಹೆಸರು : ಭೀಮರಾವ

ವಯಸ್ಸು : 35 ವರ್ಷ

ಉದ್ಯೋಗ : ರಿಪೋರ್ಟರ ETV Bharat

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಾನು ಯಾವುದೇ ಪಂಚನಾಮೆಯಲ್ಲಿ ಭಾಗಿಯಾಗಿಲ್ಲ, ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ವಶಕ್ಕೆಪಡೆದುಕೊಂಡಿಲ್ಲ. ಚಾಸಾ-1 ರವರ ಕೋರಿಕೆಯ ಮೇರೆಗೆ ನಿಪಿ-2ಕ್ಕೆ ಸಹಿ ಮಾಡಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ-2 ರಲ್ಲಿ ಇರುವ ಅಂಶಗಳು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ ಃ

ದಿ. 02-7-2014 ರಂದು ಆರೋಪಿತರು ಸಾರ್ವಜನಿಕರಿಗೆ ವಿತರಣೆ ಮಾಡುವ ಅಕ್ಕಿಯನ್ನು ಕಾಳು ಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ಚಾ ಸಾ 1, 7, 8 ಜೊತೆ ನಾನು ಹಾಗೂ ಚಾ ಸಾ 5, 6 ಕೂಡಿಕೊಂಡು ಬೆಳಿಗ್ಗೆ 10-00 ಗಂಟೆಗೆ 1 ನೇ ಮತ್ತು 2 ನೇ ಆರೋಪಿತರ ಸಾರ್ವಜನಿಕ ನ್ಯಾಯ ಬೆಲೆ ವಿತರಣೆ ಅಂಗಡಿಗೆ ಹೋಗಿ ದಾಳಿ ಮಾಡಿ ನೋಡಲಾಗಿ ಅಂಗಡಿ ಮುಂದೆ ಒಂದು ವಾಹನ ಸಂಖ್ಯೆ ಎ ಪಿ 27 ಡಿ ಡಬ್ಲೂ 9637 ನೇದ್ದರಲ್ಲಿ ಆರೋಪಿತರು 50 ಕೆ ಜಿ ಅಕ್ಕಿಯ 148 ಚೀಲಗಳು, 50 ಕೆ ಜಿಯ ಗೋಧಿ 133 ಚೀಲಗಳನ್ನು ಬೇರೆಕಡೆಗೆ ಸಾಗಾಣಿಕೆ ಮಾಡುವ ಉದ್ದೇಶದಿಂದ ಲಾರಿಯಲ್ಲಿ ತಂಬಿರುತ್ತಾರೆ ಎಂದರೆ ಸರಿಯಿಲ್ಲ. ನಂತರ ಅಂಗಡಿಯಲ್ಲಿ ಪರಿಶೀಲನೆ ಮಾಡಲಾಗಿ ಅಕ್ಕಿ 265 ಚೀಲಗಳು, ಗೋಧಿ 113 ಚೀಲಗಳು , ಸಕ್ಕರೆ 7 ಚೀಲಗಳು ಇದ್ದ

ಬಗ್ಗೆ ಕಂಡು ಬಂದಿರುತ್ತದೆ ಎಂದರೆ ಸರಿಯಿಲ್ಲ. ಇಷ್ಟೊಂದು ಆಹಾರ ಧಾನ್ಯಗಳು ಎಲ್ಲಿಂದ ಬಂದಿರುವ ಬಗ್ಗೆ ಕಡತವನ್ನು ಕೇಳಿದಕ್ಕೆ ಆರೋಪಿತನು ನಮ್ಮ ತಂದೆಯವರಿಗೆ ಗೊತ್ತಿದೆ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಿಲ್ಲ. ವಾಹನದಲ್ಲಿರುವ ಧಾನ್ಯ ಅಂದಾಜು 6 ಲಕ್ಷ ರೂ. ಗಳ ಮೌಲ್ಯದ ಆಹಾರ ಧಾನ್ಯ ಇರುತ್ತದೆ ಎಂದರೆ ಸರಿಯಿಲ್ಲ. ತನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿ ಸದರಿ ಧಾನ್ಯವನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಿಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎನ್ನುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ. ದಂ. ಸೇಡಂ.

Case called out
Accused present.
CW4 present and examined as PW6 and got marked Ex.P.2(c).
Reissue W/s to CW6, 7, 9 to 11.
Call on 08.01.2025.

JMFC., Sedam.